2. ಎ.ಟಿ.ಎಂ. ಕೇಂದ್ರಗಳಿಗೆ ಕ್ಯಾಶ್ ತಂದು ಹಾಕುವ ಕಂಪನಿಗಳಿಗೆ ಸೂಚನೆಗಳನ್ನು ನೀಡಿ ಅವರು ಕೆಲಸಕ್ಕೆ ತೆಗೆದುಕೊಳ್ಳುವ ಪ್ರತಿಯೊಬ್ಬ ಸಿಬ್ಬಂದಿಗಳ ಭಾವಚಿತ್ರ ಹಾಗೂ ಬೆರಳು ಮುದ್ರೆಗಳನ್ನು ಹಾಗೂ ಪೂರ್ವ ಹಿನ್ನೆಲೆಯ ಬಗ್ಗೆ ಪೂರ್ಣ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳುವಂತೆ ಸೂಚನೆ ನೀಡಲಾಗಿರುತ್ತದೆ.

3. ಇಂತಹ ಘಟನೆಗಳು ಜರುಗದಂತೆ ಹಗಲು, ರಾತ್ರಿ ಬೀಟ್ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳು, ಚೀತಾ ಮತ್ತು ಹೊಯ್ಸಳ ವಾಹನಗಳಿಗೂ ಹೆಚ್ಚಿನ ರೀತಿಯಲ್ಲಿ ಗಸ್ತು ಕರ್ತವ್ಯ ನಿರ್ವಹಿಸಲು ಸೂಚಿಸಿದ್ದು, ಇಂತಹ ಅಪರಾಧಗಳನ್ನು ತಡೆಯಲು ಎಲ್ಲಾ ರೀತಿಯ ಪ್ರಯತ್ನ ಮಾಡಲಾಗುತ್ತಿದೆ.

ಅಗ್ನಿಶಾಮಕ ಠಾಣೆಯ ಮಂಜೂರಾತಿ

552 (905) ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್ (ನಿಪ್ಪಾಣಿ) :– ಮಾನ್ಯ ಗೃಹ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಗಡಿ ನಗರವಾದ ನಿಪ್ಪಾಣಿಯಲ್ಲಿ ಹೊಸದಾಗಿ ಅಗ್ನಿ ಶಾಮಕ ಠಾಣೆಯು ಮಂಜೂರಾಗಿದೆಯೇ ;

(ಆ) ಹಾಗಿದ್ದಲ್ಲಿ, ಸಿಬ್ಬಂದಿಗಳನ್ನು / ವಾಹನಗಳನ್ನು ಒದಗಿಸುವುದರೊಂದಿಗೆ ಯಾವಾಗ ಅದರ ಕಾರ್ಯಾಚರಣೆ ಪ್ರಾರಂಭಿಸಲಾಗುವುದು ?

ಶ್ರೀ ಕೆ. ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು) :

(ಅ) ಹೌದು

(ಆ) ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲು ಅವಶ್ಯವಿರುವ ಕಟ್ಟಡ ನಿರ್ಮಾಣದ ಸಂಬಂಧ ನಗರಸಭೆ, ನಿಪ್ಪಾಣಿ ವ್ಯಾಪ್ತಿಯ ರಿ.ಸ.ನಂ. 132 ರಲ್ಲಿ 1 ಎಕರೆ 4 ಗುಂಟೆ ಜಾಗವನ್ನು ಪಡೆಯಲು ಕ್ರಮ ಕೈಗೊಳ್ಳಲಾಗಿದ್ದು ಪ್ರಕ್ರಿಯೆ ಪ್ರಗತಿಯಲ್ಲಿದೆ.

ನಗರಸಭೆ, ನಿಪ್ಪಾಣಿಯವರು ಒದಗಿಸಲು ಒಪ್ಪಿರುವ ತಾತ್ಕಾಲಿಕ ಕಟ್ಟಡದಲ್ಲಿ ಅಗ್ನಿಶಾಮಕ ಠಾಣೆಯ ಅವಶ್ಯಕತೆಗೆ ಅನುಗುಣವಾಗಿ ಮಾರ್ಪಾಡು ಮತ್ತು ದುರಸ್ಥಿ ಕಾರ್ಯ ಪ್ರಗತಿಯಲ್ಲಿದ್ದು, ಕಾಮಗಾರಿ ಪೂರ್ಣಗೊಂಡು ಕಟ್ಟಡವನ್ನು ಇಲಾಖೆಗೆ ಹಸ್ತಾಂತರಿಸಿದ ನಂತರ ಈ ಅಗ್ನಿಶಾಮಕ ಠಾಣೆಯನ್ನು ಅಗತ್ಯ ಸಿಬ್ಬಂದಿ / ವಾಹನಗಳೊಂದಿಗೆ ಪ್ರಾರಂಭಿಸಲಾಗುವುದು.